# ರಘೋತ್ತಮರ ಬಗ್ಗೆ ಕೆಲವು ದೇವರನಾಮಗಳು

---

ರಾಗ – ಬೇಹಾಗ್ ತಾಳ – ಆದಿತಾಳ

ಕಾಣೆನೋ ನಿನ್ನ ಸರಿ ಗುರುವೇ
ಕಾಣೆನೋ ನಿನ್ನ ಸರಿ ದೀನರಕ್ಷಕ ಜನ
ಮಾನದಿಂ ಸಲಹಯ್ಯ ಜ್ಞಾನಿಗಳ ತಿಲಕನೇ । ಪ ।

ದಕ್ಷಿಣ ಪಿನಾಕಿನಿ ತೀರದಲೊಪ್ಪುವ ಭುವಿ
ಕುಕ್ಷಿಯೊಳಗೆ ಇದ್ದು ರಕ್ಷಿಸು ಎನ್ನನೂ । 1 ।

ಹೇಯ ಮಾನವನು ನಾನು ಬೇಡುವೆ ನಿನ್ನನು
ಜ್ಞಾನ ಭಕ್ತಿ ವೈರಾಗ್ಯವ ಕರುಣಿಸೋ । 2 ।

ಕರವ ನೀಡುತ ಬರುವ ದಾಸರಿಗೇ ವರವೀವ
ಕರ ಕಲಿಸಿಕೊಂಡ ಎನ್ನ ನಾಥಾ ರಘೂತ್ತಮಾ । 3 ।

ಭಕ್ತರ ವೃಂದಕ್ಕೆ ಆಶ್ರಯವಾಗಿಪ್ಪ
ಶಕ್ತಿವಂತ ಮಹಾಪಾವನ ಚರಿತನೆ । 4 ।

ತಂದೆ ಪುರಂದರ ವಿಠಲನ ದಾಸ
ಬಂದೆನ್ನ ಅಘಗಳ ಕಳೆದು ಪೊರೆಯೋದಾತಾ । 5 ।

**(ತಂದೆ ಪುರಂದರದಾಸರ ಕೃತಿ)**

# ರಘೋತ್ತಮರ ಬಗ್ಗೆ ಕೆಲವು ದೇವರನಾಮಗಳು

ರಾಗ – ಭೈರವಿ ತಾಳ – ಝಂಪೆ

ನೋಡಿದೆ ಗುರುಗಳ ನೋಡಿದೆ ।
ನೋಡಿದೆನೋ ಗುರುಗಳ ಪದಾಬ್ಜವ
ಪಾಡಿದೆನೊ ಮಹಿಮೆಗಳ ಕೊಂಡಾಡಿದೆನು
ವದನದಲಿ ವರಗಳ ಬೇಡಿದೆನು
ಮನ ದಣಿಯ ಗುರುಗಳ । ಪ ।

ಪಂಚ ಕೃಷ್ಣಾರಣ್ಯ ಕ್ಷೇತ್ರಪಿನಾ–
ಕಿನೀ ತೀರದಲ್ಲಿ ನಿಂತು ಮಿಂಚುತಿಹ
ಕಾಷಾಯ ದಂಡ ಕಮಂಡಲವನ್ನು
ಧರಿಸುತ್ತ ಧರೆಯೊಳು
ಪಂಚ ಬಾಣನ ಪಿತನ ಗುಣಗಳ
ಅಂಚೆಯದಿ ಪೊಗಳುತ್ತ ಹರುಷದಿ
ಸಂಚಿತಾಗಾಮಿಗಳ ಕಳೆದು – ಪ್ರ
ಪಂಚದಲಿ ಮೆರೆವಂತ ಗುರುಗಳ
ನೋಡಿದೇ । 1 ।

ಆಲವ ಬೋಧರ ಭಾಷ್ಯಟೀಕಾ ಭಾವವನು
ಸುಜನರಿಗೆ ಬೋಧಿಸಿ – ಕಲುಷ
ಮತಗಿರಿ ಸಂಶಯಂಗಳ – ಕುಲಿಶ

ದಿಂದಲಿ ಖಂಡಿಸುತ ಮೂಲರಾಮ
ದಿಗ್ವಿಜಯರಾಮರ ಪಾದ ಕಮಲದೊಳ್
ಭೃಂಗನೆನಿಸಿ ವಿಮಲಭಕ್ತಿ ವಿರಕ್ತಿ ಮತಿಗಳ
ಸಲ್ಲಿಸುವ ಯತಿ ಶಿರೋಮಣಿಗಳ
ನೋಡಿದೇ ।2।

ಕಾಮಧೇನು ಸುಕಲ್ಪತರು ಚಿಂತಾಮಣಿಯ
ಪೋಲ್ ಕಾಮಿತಾರ್ಥವ ಪ್ರೇಮದಲಿ
ಬೀರುತ್ತ ಆಧ್ಯಾತ್ಮಾದಿ ತಾಪತ್ರಯವ ಕಳೆಯುವ
ಸ್ವಾಮಿ ಶ್ರೀದವಿಠಲದಾಸಾಗ್ರಣಿಯೆನಿಸಿ
ಶ್ರೀ ರಾಮಚಂದ್ರರ ಧ್ಯಾನಿಸುವ
ಯತಿರಾಜರೆನಿಪ ರಘೂತ್ತಮರ
ಪಾದ ಪಂಕಜಗಳ ನೋಡಿದೆ ।3।

(ಶ್ರೀದವಿಠಲ ದಾಸರ ಕೃತಿ)

# ರಘೋತ್ತಮರ ಬಗ್ಯೆ ಕೆಲವು ದೇವರನಾಮಗಳು

ರಾಗ – ಶಿವರಂಜನಿ ತಾಳ – ಆದಿತಾಳ

ರಘೂತ್ತಮ ಗುರುರಾಯಾ ।
ರಘೂತ್ತಮ ಪ್ರೀಯಾ ।

ಬಗೆಬಗೆಯಲ್ಲಿ ಶಿರವ ಬಾಗಿಬೇಡುವೆ ಮತಿಯ
ಭಾಗ್ಯವನಿತ್ತು ಕಾವ ರಘುವರ್ಯ ಕರಜಾತಾ । 1 ।

ಭಾವಶುದ್ಧ ಜನರಿಗೆ ಭಾವಬೋಧವ ರಚಿಸಿ
ಭವದು:ಖ ಕಳೆಯುವ ಭುವನ ಪಾವನ ಚರಿತ । 2 ।

ವಾತತಾಪಾದಿಸಹನ ಅತಿತಪೋ ಮಹಿಮನ್ನ
ತುತಿಸಲಾರೆನೋ ಚೆನ್ನ ಪ್ರೀತಿಲಿ ಸಲಹೋ ಎನ್ನ । 3 ।

ಜಯಪೂರ್ಣ ಬೋಧಾರ್ಯರ ದಯಕೆ ನೀ ರತ್ನಾಕರ
ವಿಜಯ ಹಯಗ್ರೀವ ತೋಜಜಪಾದಭ್ರಮರ । 4 ।

**ರಾಗ – ಹಿಂದೋಳ ತಾಳ – ಆದಿತಾಳ**

ಪಾಹಿ ರಘೋತ್ತಮ ಗುರುರಾಯ
ವಿದ್ಯಾಯು ಯಶಶ್ರೀ ವಿಜ್ಞಾನಪ್ರದಾಯ । ಪ ।
ಪಾಹಿ ಪ್ರಮೋದಾಗಮಾನಂದಿತಾಯ । ದಿಗಧಿಪಾಯ ।
ಗುಣಸಾಗರಾಯ । ಬುಧಗೇಯ । ಅಜೇಯ । ಅ.ಪ ।

# ರಘೋತ್ತಮರ ಬಗ್ಗೆ ಕೆಲವು ದೇವರನಾಮಗಳು

---

ರಘುವರ್ಯ ಪಾದಾಬ್ಜ ಮಧುಲಿಡ್ವರ ।
ಅಘಶೈಲ ಮಘವಾನನಘಧೀವರ ।
ನಿಗಮಾಗಮಾನಂತೋದಿತ ಭಾಸ್ಕರ ।
ರಘುವರಾಬ್ಜ ಪದಯುಗಳೇಂದೀವರ ।
ನಿಗದಿತಾಶುಗಾಶಯ ನಿಶ್ರೇಯ ।1।

ನತಕಲ್ಪದ್ರುಮ ಸಿದ್ಧ ನಿಕಶಾತ್ಮಜ ।
ಶಿತಿಕಂಠಯುತನೀತ ವಾತಾತ್ಮಜ ।
ಯತಿವರ್ಯಾನ್ವಿತ ತತ್ವಕ್ರತು ಋತ್ವಿಜ ।
ಕ್ಷಿತ್ಯಮೃತಾಂಧಸಸತ್ತಮ ದಕ್ಷಿಣ ।
ಚಿತ್ತಜಾರಿಧುನಿ ನಿತ್ಯವಿಹಾರಿ ।2।

ನಿರವದ್ಯ ಸುಖಭಾವಬೋದಾತ್ಮಕ ।
ಸಿರಿತಂದೆ ವೇಂಕಟೇಶವಿಠ್ಠಲಾರ್ಚಕ ।
ಸ್ಮರ ಸಂವತ್ಸರ ಪುಷ್ಯ ಶುಕ್ಲಾಧಿಕ ।
ಸ್ವರ್ಧಿನಾಭ್ರಪುರ ನಿರ್ಗಮನೋತ್ಸುಕ ।
ದುರ್ಗಮ ಭವ ಸಂಸರ್ಗವಿದಾರಕ । ।3।

**(ತಂದೆ ವೆಂಕಟೇಶವಿಠಲ ವಿರಚಿತ)**

**Collection by Narahari Sumadhwa for**
**www.sumadhwaseva.com**